ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಿರುದ್ಯೋಗಿಗಳಿಗೆ ಸಾಲ ಸೌಲಭ್ಯ ನೀಡಿದ ಕುರಿತು

650 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಸಣ್ಣ ಕೈಗಾರಿಕೆಗಳ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜನವರಿ 1990ರಿಂದ ಜನವರಿ 1991ರವರೆಗೆ ವಿದ್ಯಾವಂತ ನಿರುದ್ಯೋಗಿಗಳಿಗೆ ಜಿಲ್ಲಾ ಕೈಗಾರಿಕಾ ಕೇಂದ್ರದ ಮೂಲಕ ಸಾಲ ಸೌಲಭ್ಯವನ್ನೇನಾದರೂ ನೀಡಲಾಗಿದೆಯೇ ಹಾಗಿದ್ದಲ್ಲಿ, ಸಾಲ ಪಡೆದವರ ಸಂಖ್ಯೆ ಎಷ್ಟು?*

ಆ) *ಆ ಪೈಕಿ ಪುರುಷ ಹಾಗೂ ಮಹಿಳಾ ಅಭ್ಯರ್ಥಿಗಳ ಸಂಖ್ಯೆ ಎಷ್ಟು?*

ಇ) *ಸಾಲಸೌಲಭ್ಯ ಕೋರಿ ಬಂದಿದ್ದ ಅರ್ಜಿಗಳ ಒಟ್ಟು ಸಂಖ್ಯೆ ಎಷ್ಟು ಹಾಗೂ ಎಷ್ಟು ಅಭ್ಯರ್ಥಿಗಳಿಗೆ ಈ ಅವಕಾಶವನ್ನು ನಿರಾಕರಿಸಲಾಗಿದೆ. ನಿರಾಕರಿಸಲು ಕಾರಣವೇನು?*

ಈ) *ಪ್ರತಿವರ್ಷವು ಇಂತಹ ಸೌಲಭ್ಯವನ್ನು ನೀಡಲು ವಿದ್ಯಾವಂತರ ನಿರುದ್ಯೋಗಿಗಳಿಂದ ಅರ್ಜಿಗಳನ್ನು ಕರೆಯುವ ಯೋಜನೆ ಇದೆಯೆ, ಹಾಗಿದ್ದಲ್ಲಿ, ಪ್ರತಿವರ್ಷವೂ ಯಾವ ತಿಂಗಳಲ್ಲಿ ಈ ಅರ್ಜಿಗಳನ್ನು ಕರೆಯಲಾಗುತ್ತದೆ?*

ಶ್ರೀ ನಜೀರ್ ಅಹ್ಮದ್ (ಸಣ್ಣ ಕೈಗಾರಿಕೆಗಳ ರಾಜ್ಯ ಮಂತ್ರಿಗಳು) :

ಅ)

ಫಲಾನುಭವಿಗಳು	ಮಂಜೂರಾದ ಹಣ ಲಕ್ಷಗಳಲ್ಲಿ
779	92.08

ಅರ್ಜಿಗಳನ್ನು ಸಾಲ ಮಂಜೂರಾತಿಗಾಗಿ ಆಯಾ ಬ್ಯಾಂಕ್ ಗಳಿಗೆ ಶಿಫಾರಸ್ಸು ಮಾಡಲಾಗಿದೆ.

ಆ)

ಪುರುಷರು	ಮಹಿಳೆಯರು
646	133

ಅರ್ಜಿಗಳು ಬಂದಿರುವುದು	ನಿರಾಕರಿಸಿರುವುದು.
3455	2676

ಇ) ನಿರಾಕರಿಸಲು ಕಾರಣ. 1989-90ಮತ್ತು 1990-91ಕ್ಕೆ ಕೇಂದ್ರ ಸರ್ಕಾರದಿಂದ 6200 ಮತ್ತು 6150 ರ ಫಲಾನುಭವಿಗಳ ಗುರಿಯನ್ನು ಕ್ರಮವಾಗಿ ಕರ್ನಾಟಕ ರಾಜ್ಯಕ್ಕೆ ನಿಗಧಿಪಡಿಸಲಾಗಿತ್ತು. ಈ ಗುರಿಯನ್ನು 20 ಜಿಲ್ಲೆಗಳಿಗೆ ಹಂಚಲಾಗಿದೆ, ಅದರಂತೆ ಗುರಿಯನ್ನು ಮೀರಿಬಂದ ಅರ್ಜಿಗಳನ್ನು ಆಯಾ ಟಾಸ್ಕ್ ಫೋರ್ಸ್ ಕಮಿಟಿಗಳಲ್ಲಿ ನಿರಾಕರಿಸಲಾಗಿದೆ.

ಈ) ಅರ್ಜಿಗಳನ್ನು ಕರೆಯಲು ಕೇಂದ್ರಸರ್ಕಾರದವರು ಆಯಾ ಆರ್ಥಿಕ ವರ್ಷಗಳಲ್ಲಿ ತಿಳಿಸಿರುತ್ತಾರೆ. ಅದರಂತೆ ಅರ್ಜಿಗಳನ್ನು ಕರೆಯಲಾಗುತ್ತದೆ. ಕೇಂದ್ರ ಸರ್ಕಾರದವರು ತಿಳಿಸಿದ ಕೂಡಲೆ ಒಂದರಿಂದ ಎರಡು ತಿಂಗಳ ಕಾಲಾವಕಾಶಕೊಟ್ಟು ಅರ್ಜಿಗಳು ಕರೆಯಲಾಗುವುದು, ಇದು ಸಾಮಾನ್ಯವಾಗಿ ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳುಗಳಾಗಿರುತ್ತೆ.

ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ನೇರ ನೇಮಕಾತಿ ಬಗ್ಗೆ.

712 - ಶ್ರೀ ಅಂಜನಮೂರ್ತಿ (ನೆಲಮಂಗಲ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವಿವಿಧ ಪದವಿ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಇದುವರೆವಿಗೂ ಎಷ್ಟು 'ಎ' ಮತ್ತು 'ಬಿ' ಗುಂಪಿನಲ್ಲಿ ನೇರ ನೇಮಕಾತಿಯನ್ನು ಸರ್ಕಾರ ಮಾಡಿಕೊಂಡಿದೆ. (ಪೂರ್ಣ ವಿವರಗಳನ್ನೂ ನೀಡುವುದು).

ಆ) ಈ ರೀತಿ ಇನ್ನು ಎಷ್ಟು ಅರ್ಜಿಗಳು ಬಾಕಿ ಉಳಿದಿದೆ. ಹಾಗಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು):

ಕೆಳಗೆ ಕಾಣಿಸಿದ ಮೂವರನ್ನು ಕೃಷಿ ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ.

1. ಶ್ರೀ ಎಂ. ಮಲ್ಲಯ್ಯ
2. ಶ್ರೀ ಬಿ. ಶಿವರಾಜು
3. ಶ್ರೀ ಎಂ. ಜಯರಾಮಯ್ಯ

ಆ) ಅರ್ಜಿ ಸಲ್ಲಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಆದರೆ ಆಯ್ಕೆ ಕಾರ್ಯಕ್ರಮ ನಡೆಯುತ್ತಿದೆ.

ವಿಶೇಷ ಘಟಕ ಯೋಜನೆಗೆ ಇದುವರೆವಿಗೆ ಹಣ ಒದಗಿಸಿರುವ ಬಗ್ಗೆ.

619 - ಡಾ. ಜಿ. ಪರಮೇಶ್ವರ (ಮಧುಗಿರಿ): ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರ ಕಳೆದ ಸಾಲಿನಲ್ಲಿ ಎಷ್ಟು ಹಣವನ್ನು ಸ್ಪೆಷಲ್ ಕಾಂಪೊನೆಂಟ್ ಪ್ಲ್ಯಾನ್‌ಗಾಗಿ ಒದಗಿಸಿದೆ?

ಆ) ಇದರಲ್ಲಿ ಎಷ್ಟು ಹಣವನ್ನು ಉಳಿಸಿದೆ ಮತ್ತು ಎಷ್ಟು ಹಣ ಇದುವರೆಗೂ ಖರ್ಚಾಗಿದೆ?

ಇ) ಒಂದು ವೇಳೆ ಹಣ ಖರ್ಚಾಗದೇ ಉಳಿದಿದ್ದರೆ ಇದಕ್ಕೆ ಯಾರು ಹೊಣೆ?

ಈ) ಈ ಹಣವನ್ನು ಯಾವ ರೀತಿ ಖರ್ಚು ಮಾಡುವುದಕ್ಕೆ ಸರ್ಕಾರ ಉದ್ದೇಶಿಸಿದೆ?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು):

ಅ) ರೂ. 11,508.00 ಲಕ್ಷಗಳು (1989-90)

ಆ) ಖರ್ಚುಮಾಡಲಾದ ಹಣ ರೂ. 8797.80 ಲಕ್ಷ

ಬಾಕಿ ಉಳಿದಿರುವ ಹಣ ರೂ. 2710.20 ಲಕ್ಷ

ಇ) ವಿವಿಧ ಅಭಿವೃದ್ಧಿ ಇಲಾಖೆಗಳು ಈ ಹಣವನ್ನು ಖರ್ಚು ಮಾಡುವ ಜವಾಬ್ದಾರಿ ಹೊಂದಿವೆ.

ಈ) ಹಿಂದಿನ ವರ್ಷಗಳಲ್ಲಿ ನಿಗದಿಪಡಿಸಿದ ಹಣ ಖರ್ಚಾಗದ ಪ್ರಯುಕ್ತ ಹಣದ ಸರಿಯಾದ ಬಳಕೆಗಾಗಿ ಸರ್ಕಾರವು 1990-91ನೇ ಸಾಲಿನಲ್ಲಿ ಕೆಲವು ಇಲಾಖೆಗಳ ಹಣವನ್ನು ಗುಂಪುಗೂಡಿಸಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮಂಡಲಿ ಬಗ್ಗೆ

618 - ಶ್ರೀ ಕೆ. ಲಕ್ಷ್ಮಣ್ಣ (ರಾಜಾಜಿನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?